ನಾಗಮಂಗಲ ಟೌನ್‌ನಲ್ಲಿರುವ ವಿದ್ಯಾರ್ಥಿ ನಿಲಯಕ್ಕೆ ಪ್ರವೇಶಾವಕಾಶ

373(506) ಶ್ರೀ ಎನ್. ಚಲುವರಾಯ ಸ್ವಾಮಿ (ನಾಗಮಂಗಲ): ಮಾನ್ಯ ವಿದ್ಯಾರ್ಥಿನಿಲಯಕ್ಕೆ ಪ್ರವೇಶಾವಕಾಶ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ನಾಗಮಂಗಲ ಟೌನ್ ನಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ಪ್ರವೇಶ ಅವಕಾಶ ಕೋರಿ ಸುಮಾರು 165 ಅರ್ಜಿಗಳು ಪ್ರತಿ ವರ್ಷಕ್ಕೆ ಬರುತ್ತಿದ್ದು, ಅರ್ಹ ಕಡು ಬಡವ ಹೆಣ್ಣುಮಕ್ಕಳಿಗೆ ಪ್ರವೇಶ ಅವಕಾಶ ಸಿಕ್ಕದೆ ವಿದ್ಯಾಭ್ಯಾಸ ನಿಲ್ಲಿಸುವ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಬಂದಿದ್ದರೆ, ಈ ಪ್ರವೇಶ ಸಂಖ್ಯೆಯನ್ನು 75 ರಿಂದ 125 ಕ್ಕೆ ಏರಿಸಲು ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

1. ನಾಗಮಂಗಲದಲ್ಲಿ ಪರಿಶಿಷ್ಟ ಜಾತಿಯ ಬಾಲಕಿಯರ ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯವಿದೆ. ನಾಗಮಂಗಲದಲ್ಲಿ ಪರಿಶಿಷ್ಟ ವರ್ಗಗಳ ಮತ್ತು ಹಿಂದುಳಿದ ವರ್ಗಗಳ ಬಾಲಕಿಯರ ವಿದ್ಯಾರ್ಥಿನಿಲಯ ಇರುವುದಿಲ್ಲ.

ಸಂಖ್ಯಾಬಲ ಹೆಚ್ಚಿಸುವ ಬಗ್ಗೆ ಕೋರಿಕೆಗಳನ್ನು ಸ್ವೀಕರಿಸಿರುವುದಿಲ್ಲ.

2. ಅನ್ವಯಿಸುವುದಿಲ್ಲ.

ನಾಗಮಂಗಲ ತಾಲ್ಲೂಕಿನ ಮಸೀದಿಗಳಿಗೆ ಹಣ ಬಿಡುಗಡೆ

374(507) ಶ್ರೀ ಚಲುವರಾಯ ಸ್ವಾಮಿ.ಎನ್ (ನಾಗಮಂಗಲ) : ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ನಾಗಮಂಗಲ ತಾಲ್ಲೂಕಿನಲ್ಲಿ ಯಾವ ಯಾವ ಮಸೀದಿಗಳಿಗೆ ವಕ್ಫ್ ಮಂಡಳಿ ವತಿಯಿಂದ ಧಾರ್ಮಿಕ ಕಾರ್ಯಗಳ ಹಾಗೂ ಕಾಮಗಾರಿಗಳನ್ನು ಕೈಗೊಳ್ಳಲು ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? (ವಿವರ ಒದಗಿಸುವುದು)

ಆ. ನಾಗಮಂಗಲ ತಾಲ್ಲೂಕಿನ ಬಿಂಡಿಗನವಿಲೆ ಗ್ರಾಮದಲ್ಲಿರುವ ಜಾಮಿಯಾ ಮಸೀದಿಯ ಸುತ್ತ ಗೋಡೆಯನ್ನು ಕಟ್ಟಲು ಹಣ ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಇ. ಹಾಗಿದ್ದಲ್ಲಿ, ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ.ಎಲ್. ಉಸ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ. ಕಳೆದ 3 ವರ್ಷಗಳಲ್ಲಿ ಸರ್ಕಾರದಿಂದ ನಾಗಮಂಗಲ ತಾಲ್ಲೂಕಿಗೆ ಮಂಜೂರು ಮಾಡಿರುವ ಅನುದಾನದ ವಿವರ ಈ ಕೆಳಗಿನಂತಿದೆ.

1999-2000

1. ಮದೀನಾ ಮಸೀದಿ, ಟಿ.ಬಿ.ಎಕ್ಸ್‌ಟೆನ್‌ಷನ್ ನಾಗಮಂಗಲ-ರೂ.20,000-00
2. ಜುಮ್ಮಾ ಮಸೀದಿ, ಬಿಂಡಿಗಮೆಲಾ ನಾಗಮಂಗಲ - ರೂ.20,000-00

2000-2001

1. ಮಕ್ಕಾ ಮಸೀದಿ ನಾಗಮಂಗಲ-ರೂ. 20,000
2. ಜುಮ್ಮಾ ಮಸೀದಿ, ನಾಗಮಂಗಲ-ರೂ.20,000